ISSN : 2583-2948

# ಗಾಳಿಗೆ ತೊಟ್ಟಿಲ ಕಟ್ಟಿ: ದೊರೆ ಮತ್ತು ಫಕೀರ್ ಪರಿಕಲ್ಪನೆಯ ಮರುವ್ಯಾಖ್ಯಾನ

ಡಾ. ಮಧು ಬಿರಾದಾರ
ಉಪನ್ಯಾಸಕರು
ಕನ್ನಡ ವಿಭಾಗ
ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು.
ಮೊ-೯೬೮೬೬೪೫೨೬೩

ಒಂದು ಕಾಲದಲ್ಲಿ ಸೀಮಿತವಾದ ವರ್ಗಕ್ಕೆ ರಾಜಕೀಯ ಮುಖ್ಯವಾಗಿತ್ತು. ಹಾಗಾಗಿ ಅದು ಸೀಮಿತ ವಲಯದಲ್ಲಿ ಚರ್ಚೆಗೆ ಒಳಪಟ್ಟಿತ್ತು. ಇವತ್ತು ಸಂವಹನ ಮತ್ತು ಸಾಮಾಜಿಕ ಮಾಧ್ಯಮಗಳ ಕ್ರಾಂತಿಯಿಂದ ಸಾಮಾನ್ಯ ಜನರ ಬದುಕಿನಲ್ಲಿಯೂ ರಾಜಕೀಯ ಪ್ರಜ್ಞೆ ಬೆಳೆದಿದೆ. ಹಾಗಾಗಿ ಎಲ್ಲದರಲ್ಲೂ ರಾಜಕೀಯ ಸಾಮಾನ್ಯವಾಗಿದೆ. ತಳ ಬುಡವಿಲ್ಲದವರೂ ರಾಜಕೀಯಕ್ಕೆ ಒಗ್ಗಿಕೊಂಡಿದ್ದಾರೆ. ಅದು ನಿತ್ಯ ಬದುಕಿನ ಭಾಗವೇ ಆಗಿದೆ. ರಾಜಕೀಯ ಪ್ರಜ್ಞೆ ಒಳ್ಳೆಯದು, ಆದರೆ ಅದು ಕೇವಲ ಒಣರಾಜಕೀಯವಾದರೇ ಭವಿಷ್ಯದ ಗತಿ ಏನಾದಿತು?

ಸ್ವಾತಂತ್ರ್ಯೋತ್ತರ ಕನ್ನಡ ಕಾವ್ಯವು ಸ್ವತಂತ್ರ ಭಾರತದ ಕುರಿತು ಭ್ರಮನಿರಸನವನ್ನು ಆ ಸಂದರ್ಭದಲ್ಲಿಯೇ ದಾಖಲಿಸಿರುವುದನ್ನು ಗೋಪಾಲಕೃಷ್ಣ ಅಡಿಗ, ಗಂಗಾಧರ ಚಿತ್ತಾಲ ಮುಂತಾದವರ ಕಾವ್ಯವನ್ನು ಗಮನಿಸಿದರೆ ಮನವರಿಕೆಯಾಗುತ್ತದೆ. ಸ್ವತಂತ್ರ ಭಾರತದ ರಾಜಕೀಯವು ಗಾಂಧಿ ತತ್ವ ಮತ್ತು ಆದರ್ಶವನ್ನು ಭ್ರಷ್ಟಗೊಳಿಸಿತು. ಅದು ಯಾವ ಮಟ್ಟಕ್ಕೆ ಕಲುಷಿತಗೊಂಡಿತೆಂದರೆ ಗಾಂಧಿನೇ ಭ್ರಷ್ಟ ಅಥವಾ ಗೊಂದಲಗಳನ್ನು ಸೃಷ್ಟಿಸಿದವನು ಮತ್ತೂ ಇವತ್ತಿನ ಭಾರತದ ಸಮಸ್ಯೆಗೆ ಗಾಂಧೀಜಿಯೇ ಕಾರಣವೆನ್ನುವ ಮಟ್ಟಕ್ಕೆ ಒಂದು ವಿತಂಡವಾದ ಬೆಳೆದುಬಿಟ್ಟಿದೆ. ಅಥವಾ ಪ್ರಜ್ಞಾಪೂರ್ವಕವಾಗಿ ಬೆಳೆಸಲಾಗಿದೆ. [೧]"ಸ್ವಾತಂತ್ರ್ಯವು ಬಯಸಿದ್ದನ್ನು ತರಲಿಲ್ಲ ಎಂಬ ಅರಿವು ಮೂಡುವುದಕ್ಕೆ ಹೆಚ್ಚು ದಿನಗಳೇನೂ ಹಿಡಿಯಲಿಲ್ಲ. ಗಾಂಧೀವಾದದ ಎಲ್ಲಾ ಆದರ್ಶಗಳೂ ಮಣ್ಣುಪಾಲಾದವು. ಗಾಂಧೀಜಿಯವರ ಸಾವು ಕೂಡ ಆ ಯುಗದ ಆ ಮೌಲ್ಯಗಳ ಕ್ರೂರ ಹತ್ಯೆಯನ್ನು ಸಂಕೇತಿಸಿತು. ಅಲ್ಲಿಂದ ಒಂದೇ ಸಮನೆ ರಾಜಕೀಯದ ಅಧಃಪತನ ಆರಂಭವಾಯಿತು. ಸಮಾಜವಾದ, ಪ್ರಜಾಪ್ರಭುತ್ವ, ಜಾತ್ಯಾತೀತತೆಯ ಆದರ್ಶಗಳು ಕೇವಲ ಭಾಷಣದ ಸರಕುಗಳಾಗಿ ಮಾತ್ರ ಉಳಿದವು. ಬಡತನ, ನಿರುದ್ಯೋಗ, ಭ್ರಷ್ಟಾಚಾರ, ಅಧಿಕಾರಶಾಹಿಯ ಅಟ್ಟಹಾಸಗಳು ಜನಜೀವನದ ಎಲ್ಲ ಸ್ತರಗಳನ್ನೂ ತಾಕಿದವು. ಇದರಿಂದಾಗಿ ವ್ಯಾಪಕವಾದ ಭ್ರಮನಿರಸನದ ದನಿ  ಮುಂದಿನ ಕಾವ್ಯದಲ್ಲಿ ಸ್ಥಾಯಿಯಾಯಿತು. ಸ್ವಾತಂತ್ರ್ಯೋತ್ತರದ ನವೋದಯ ಮತ್ತು ನವ್ಯ ಕಾವ್ಯಗಳೆರಡರಲ್ಲೂ ಈ ಭಾವನೆಗಳನ್ನು ಕಾಣಬಹುದು." [೧]

೨೧ನೇ ಶತಮಾನದ ಈ ಎರಡು ದಶಕಗಳು ವಿಚಿತ್ರವಾದ ಗೊಂದಲಗಳಿಂದ ಕೂಡಿದೆ. ಈ ಹಿಂದೆ ಹೀಗೆ ಇರಲಿಲ್ಲವೆಂದಲ್ಲ. ಆದರೆ ಇಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ ಚಲನೆಯ ದಿಕ್ಕು ತಪ್ಪಿದೆಯೆಂದು ಹೇಳಬಹುದು. ಒಂದು ಕಾಲದ ಭಾರತದ ಪ್ರಾಮಾಣಿಕತೆ ಮೌಲ್ಯವಾಗಿದ್ದು, ಸಮಗ್ರ ಭಾರತದ ಒಟ್ಟು ರಾಜಕೀಯ ತಾತ್ವಿಕತೆಯ ರೂಪದಂತಿದ್ದ ಮಹಾತ್ಮ ಗಾಂಧಿ, ರಾಮಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣ, ಅಂಬೇಡ್ಕರರ ಮತ್ತು ಆಧ್ಯಾತ್ಮದ ರೂವಾರಿಯಂತಿದ್ದ ಗಾಂಧಿ, ವಿನೋಬಾ ಭಾವೆ, ರವೀಂದ್ರನಾಥ ಟ್ಯಾಗೋರ, ಮಹರ್ಷಿ ಅರವಿಂದ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ಇತ್ಯಾದಿ ಇತ್ಯಾದಿ ಮಹಾನ ನಾಯಕರ ನಿಲುವುಗಳು ಅಥವಾ ಸೈದ್ಧಾಂತಿಕ ವಿಚಾರಗಳು ಹಿನ್ನೆಲೆಗೆ ಸರಿದು ಅವಕಾಶವಾದ, ವಂಶವಾಹಿ ನಿಲುವು ಒಟ್ಟು ಭಾರತದ ರಾಜಕೀಯವೇ ಭ್ರಷ್ಟಗೊಳಿಸಿದವು. ಅವಕಾಶವಾದ ಮತ್ತು ಕುಟುಂಬ ರಾಜಕೀಯ ತೋರಿಕೆ ಮತ್ತು ಗೌಪ್ಯ ಮನೋಭಾವವನ್ನು ರೂಪಿಸಿಕೊಂಡವು. ಈ ಕಾರಣದಿಂದಲೇ ಭಾರತದ ಜಾತಿ ವ್ಯವಸ್ಥೆ ಹಾಗೂ ಧರ್ಮ ರಾಜಕೀಯಗೊಂಡಿತು. ಪ್ರಗತಿಪಥ ಎನ್ನುವುದು ಹುಸಿ ನಾಟಕೀಯ ಡೈಲಾಗವಾಗಿ ಉಳಿಯಿತು. ಒಟ್ಟು ಒಂದು ವ್ಯವಸ್ಥೆಯನ್ನು ಸ್ವತಂತ್ರಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದವರು ಸಾಧ್ಯವಾದಷ್ಟು ಅಜ್ಞಾತವಾಗಿ ಉಳಿದರು. ಆದರೆ ಅವರ ಸಾಧುತನ ಮತ್ತು ಸರಳ ಜೀವನ ಕ್ರಮ ಮುಂದಿನ ರಾಜಕೀಯಕ್ಕೆ ಮುಖ್ಯವಾಗಲಿಲ್ಲ. ಈ ಬಗೆಯ ಹಲವು ಅಂಶಗಳನ್ನು 'ಗ್ಯಾರಿಬಾಲ್ಡಿ' ಕವಿತೆಯ ಮೂಲಕ ನೋಡಬಹುದು.

"ದೇವು ಮಾಕೊಂಡರವರ 'ಗಾಳಿಗೆ ತೊಟ್ಟಿಲ ಕಟ್ಟಿ' ಕವನ ಸಂಕಲನವು ಇಡಿಯಾಗಿ ಸಾಮಾಜಿಕ ನೆಲೆಯದ್ದು".೨ ಈ ಸಾಮಾಜಿಕ ಅಂಶವೇ ಪ್ರಖರ ರಾಜಕೀಯ ಪ್ರಜ್ಞೆಯಾಗಿ ಇಲ್ಲಿಯ ಕವಿತೆಗಳು ಧ್ವನಿಸುತ್ತವೆ. ಸೃಷ್ಟಿಕ್ರಿಯೆಯಂತೆ ಒಟ್ಟು ಮನುಷ್ಯ ಬದುಕಿಗೂ ಚಲನಶೀಲಗುಣ ಇದೆ. ಆ ಕಾರಣದಿಂದಲೇ ಮನುಷ್ಯನ ಬದುಕಿನ ಎಲ್ಲಾ ಪ್ರಕ್ರಿಯೆಗಳು ಕಾಲದ ಚಲನೆಯ ಭಾಗವಾಗಿರುತ್ತದೆ. ಪ್ರಕೃತಿ ಮತ್ತು ಕಾಲ ಈ ಎರಡನ್ನು ಹೊರತುಪಡಿಸಿ ಭೌತಿಕ ಜಗತ್ತನ್ನು ಕಲ್ಪಿಸಿಕೊಳ್ಳಲು ಅಸಾಧ್ಯವಾಗುತ್ತದೆ. ಇವುಗಳಿಂದಲೇ ಮನುಷ್ಯನು ಬದುಕಿನಲ್ಲಿ ಕಾಲಾಂತರದಿಂದ ಹಲವು ವಿಕಾಸವನ್ನು ಕಂಡಿದ್ದಾನೆ.

ಈ ಪ್ರಕ್ರಿಯೆಯಲ್ಲಿ ಸಾಮಾಜಿಕ ವ್ಯವಸ್ಥೆ ಕೂಡ ಮುಖ್ಯವಾಗಿದೆ. ಕಾರಣ ಮನುಷ್ಯ ಮೂಲತಃ ಸಮೂಹ ಜೀವಿ. ಅದರ ಭಾಗವಾಗಿಯೇ ಕುಟುಂಬ ವ್ಯವಸ್ಥೆ, ಕೂಡು ಜೀವನ, ಸಾಮಾಜಿಕ, ಆರ್ಥಿಕ, ರಾಜಕೀಯ ಇತ್ಯಾದಿಯನ್ನು ಒಳಗೊಂಡಿರುವುದು. ಎಲ್ಲವೂ ಮುಖ್ಯ. ಒಂದೊಂದಕ್ಕೆ ಒಂದೊಂದು ಮಹತ್ವವಿದೆ. ಆದರೆ ಕಾಲಾಂತರದಲ್ಲಿ ರಾಜಕೀಯವೇ ಮುಖ್ಯವಾಗುತ್ತ ಬಂದಿರುವುದನ್ನು ಚರಿತ್ರೆ ಮತ್ತು ವರ್ತಮಾನವನ್ನು ಗಮನಿಸಿದರೆ ಅರಿವಿಗೆ

ಬರುವಂತದ್ದು. ಹಿಂದೆಂದಿಗಿಂತ ಇವತ್ತು ಒಟ್ಟು ಜೀವನ ಕ್ರಮದ ಮೇಲೆ ರಾಜಕೀಯ ಪ್ರಭಾವಬೀರುತ್ತಿದೆ. ಅದರ ಆಗು-ಹೋಗುಗಳ ಪರಿಣಾಮಗಳನ್ನು ನಾವೆಲ್ಲ ಅನುಭವಿಸುತ್ತಿದ್ದೇವೆ. ಹಾಗೂ ಪ್ರತಿಕ್ರಿಯಿಸುತ್ತಲೇ ಇದ್ದೇವೆ. ಇದು ಕೂಡ ಎಲ್ಲ ಕಾಲದಲ್ಲೂ ನಡೆಯುವಂತದ್ದು. ಆದರೆ ಆಯಾ ಕಾಲಕ್ಕೆ ತಕ್ಕಂತೆ ಕಲೆ ಮತ್ತು ಸಾಹಿತ್ಯದ ಪ್ರತಿಕ್ರಿಯೆಯ ಬಗೆ ಯಾವುದು? ಅದರ ಒಟ್ಟು ಸ್ವರೂಪದ ಪ್ರಕ್ರಿಯೆ ಹೇಗಿತ್ತು? ಸ್ಥಳೀಯತೆಯಿಂದ ಜಾಗತಿಕ ಸಾಹಿತ್ಯದವರೆಗೆ ಅದರ ಹರವು ಇದೆ. ಕಾಲಕಾಲಕ್ಕೆ ಎದುರಾಗುವ ಗಂಡಾಂತರ, ಪ್ರಕ್ಷುಬ್ಧತೆಗೆ ಸಾಹಿತ್ಯ ದಾರಿ ಕಂಡುಕೊಂಡಿದೆ. ಈ ಎಲ್ಲ ವಿಷಯಗಳ ಹಿನ್ನೆಲೆಯಲ್ಲಿ 'ಗಾಳಿಗೆ ತೊಟ್ಟಿಲ ಕಟ್ಟಿ' ಕವನ ಸಂಕಲನದ ರಾಜಕೀಯ ಪಲ್ಲಟ, ಸ್ಥಿತ್ಯಂತರ ಮತ್ತು ಮೌಲ್ಯಗಳ ಅವಸರ್ಪಿಣಿಯನ್ನು ಕಣ್ಣಳತೆಯಲ್ಲಿ ಈ ಲೇಖನದ ಮೂಲಕ ವಿಶ್ಲೇಷಿಸಲಾಗಿದೆ.

ನವ್ಯ ಮತ್ತು ಬಂಡಾಯ ಸಾಹಿತ್ಯದ ತಾತ್ವಿಕತೆಯನ್ನು ಜೀರ್ಣಿಸಿಕೊಂಡ ಇಲ್ಲಿಯ ಕವಿತೆಗಳು ವರ್ತಮಾನದ ದಂದುಗವನ್ನು ಭಾವಾವೇಶ ಮತ್ತು ಬೌದ್ಧಿಕ ಕಸರತ್ತಿಲ್ಲದೆ ಅಭಿವ್ಯಕ್ತಿಸುವ ಕ್ರಮ ವಿಶಿಷ್ಟ ಪ್ರಯೋಗಾತ್ಮಕ ಮಾದರಿಯಿಂದಾಗಿದೆ. ಒಂದು ಕಾಲಮಾನದ ಸ್ಥಿತ್ಯಂತರವನ್ನು ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ತಾತ್ವಿಕ ನೆಲೆಯಲ್ಲಿ ಪರಿಭಾವಿಸುವ ಕವಿ, ಕೇಳುವ, ಕೇಳಿಸಿಕೊಳ್ಳುವಂತೆ ಪ್ರಶ್ನಿಸುವ ಬಗೆ ದಟ್ಟವಾದ ಪ್ರತಿಮೆ, ರೂಪಕ, ಪೌರಾಣಿಕ, ಚಾರಿತ್ರಿಕ ಚಿತ್ರಗಳನ್ನು ಮೂಡಿಸಿ ಈ ಸ್ಥಿತ್ಯಂತರಕ್ಕೆ ಕಾರಣ ಮತ್ತು ಅಪಾಯ (ಪರಿಣಾಮ)ವನ್ನು ಸೂಚ್ಯವಾಗಿ ಕವಿತೆಯ ಮೂಲಕ ಸ್ಪಷ್ಟಪಡಿಸುವನು.

ಗಾಂಧಿಯನ್ನು ಹೊರತುಪಡಿಸಿ ಆಧುನಿಕ ಕನ್ನಡ ಸಾಹಿತ್ಯವನ್ನು ಅರಿಯಲು ಸಾಧ್ಯವಿಲ್ಲ. ಗಾಂಧಿಯ ಜೊತೆ ಜೊತೆಗೆ ಕುತೂಹಲದಿಂದ ಹೆಜ್ಜೆ ಹಾಕುತ ರೂಪಗೊಂಡ ಸಾಹಿತ್ಯ ಒಂದು ಬಗೆಯದಾದರೆ ಮುಖಮುಖಿಯಾಗುವುದರಿಂದ, ಪ್ರಶ್ನಿಸುವುದರಿಂದ ಸೈದ್ಧಾಂತಿಯ ಕಾರಣಕ್ಕಾಗಿ ತೀವ್ರವಾಗಿ ಖಂಡಿಸುವ ಮೂಲಕ ಬಹುಮುಖಿ ನೆಲೆಯಲ್ಲಿ ಗಾಂಧಿಯನ್ನು ಒಳಗೊಳ್ಳಲಾಯಿತು. ಅಷ್ಟಕ್ಕೂ ಇಲ್ಲಿ ಗಾಂಧಿಯನ್ನು ಕೇವಲ ವಿಚಾರವಾಗಿ, ಸಿದ್ಧಾಂತವಾಗಿ ಸ್ವೀಕರಿಸಲಿಲ್ಲ. ಒಂದು ಜೀವನ ಕ್ರಮವಾಗಿ, ಹಲವು ವಿಚಾರಧಾರೆಗಳ ಮೊತ್ತವಾಗಿ, ಹಲವು ಭಿನ್ನಾಭಿಪ್ರಾಯಗಳ ಮಧ್ಯನ್ನೂ ಬಿಟ್ಟುಕೊಡಲಾಗದ ಶಕ್ತಿಯಾಗಿ ಮುಖ್ಯವಾದವರು ಗಾಂಧಿ. ಹಾಗಾಗಿಯೇ ಆಧುನಿಕ ಕನ್ನಡ ಸಾಹಿತ್ಯದ ಒಳಗೆ ಬುದ್ಧ, ಬಸವ, ಸ್ವಾಮಿ ವಿವೇಕಾನಂದ, ಗಾಂಧಿ, ಅಂಬೇಡ್ಕರ ಒಟ್ಟು ಜೀವ ದ್ರವ್ಯವಾಗಿ ಹಾಗೂ ಆರದ ಪಸೆಯಾಗಿ ಕನ್ನಡ ಸಾಹಿತ್ಯದ ಕೇಂದ್ರ ಪ್ರಜ್ಞೆಯನ್ನು ಪರಿಭಾವಿಸಿದ್ದಾರೆನ್ನಬಹುದು.

'ಗಾಳಿಗೆ ತೊಟ್ಟಿಲ ಕಟ್ಟಿ' ಕವನ ಸಂಕಲನವು ಈ ಮೇಲಿನ ವಿಚಾರಧಾರೆಯ ಮೊತ್ತವೆ ಆಗಿದೆ. ಸ್ವಾಮಿ ವಿವೇಕಾನಂದರ ವಿಚಾರಧಾರೆಯ ಅಪ್ರಸ್ತುತಗೊಳಿಸುತ್ತಿರುವ ಬಗೆ ಒಂದಾದರೆ, ವರ್ತಮಾನದ ಜಗತ್ತಿಗೆ

ವಿಚಾರಧಾರೆಗಳ ಅನಿವಾರ್ಯತೆಯನ್ನು ಒತ್ತಿ ಹೇಳುವ ಕವಿಗೆ ವಿಚಿತ್ರವಾದ ಸಂಕಟವಿದೆ. 'ಖಾಲಿ ಬೆಂಚುಗಳ ಪ್ರಶ್ನೆ' ಕವಿತೆ ಆ ಬಗೆಯ ಚಿತ್ರಣಕ್ಕೆ ನಿದರ್ಶನವಾಗಿದೆ.

'ಅವನು ಕಟ್ಟಿ ಮೇಯಿಸಿದ ಧರ್ಮ

ಹಗ್ಗ ಹರಿದುಕೊಂಡು

ಗೂಟ ಬದಲಿಸಿಕೊಂಡಿದೆ

ಬಾಲಿಶ ಮೋಹ ಮಹಲುಗಳಿಗೆ

ಅವನು ನೆಟ್ಟ ಪಡಿ ಪದಾರ್ಥಗಳು

ಹಸಿ ಮಣ್ಣಿನ ಹುಸಿ ಬೀಜಗಳಾಗಿವೆ

ಕಪ್ಪು ಹಲಗೆಯ ಮೇಲೆ ಬರೆಯುವ ಹಾಗಿಲ್ಲ ಸಂತನೆಂದು ಸನಾತನ ಪರಿಚಾರಕನೆಂದು'೩

ಏಕನಾದವನ್ನು ಅಪವ್ಯಾಖ್ಯಾನಗೊಳಿಸಿ ಅಖಂಡ ನೆಲದಲ್ಲಿ ವಿರೂಪ(ತದ್ವಿರುದ್ಧ)ವನ್ನು ಏಕೀಕೃತ ಕಂಠದಲ್ಲಿ ಕಥೆಯಾಗಿಸಿ ಪಾರಾಯಣ ಮಾಡಲಾಗುತ್ತಿದೆ. ಕವಿಯ ಕಾಳಜಿ, ಪ್ರಶ್ನೆ ಮತ್ತು ಸಾದೃಶ್ಯ ರೂಪ ಮೌಲ್ಯಯುತವಾದದ್ದಾಗಿದೆ.

ವರ್ತಮಾನದ ಆಗುಹೋಗುಗಳಿಗೆ ಗಂಭೀರವಾಗಿ ಎದುರುಗೊಳ್ಳದ ಕವಿ ಮತ್ತು ಕವಿತೆ ಬಹುದೂರ ಸಾಗಲು ಸಾಧ್ಯವಿಲ್ಲ. ಹಾಗಂತ ವರ್ತಮಾನ ಕ್ಲಿಷೆಯಾಗಬಾರದು. ಅಲ್ಲಮ, ಬಸವ, ಅಕ್ಕ, ಕನಕ, ಶರೀಫ್ ಮುಂತಾದವರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಲು ಇದು ಒಂದು ಕಾರಣ. ಕಣ್ಣೆದುರಿನ ಅಗ್ನಿಯನ್ನು ಹಾಯದೆ ಸಾಗುವುದಾದರೂ ಹೇಗೆ? ಈ ಅಗ್ನಿ ಒಟ್ಟು ಕನ್ನಡ ಕೇಂದ್ರ ಪ್ರಜ್ಞೆಯನ್ನು ಜೀವಂತವಾಗಿಟ್ಟಿದೆ. ಅದು ತಲೆಮಾರಿನಿಂದ ತಲೆಮಾರಿಗೆ ಸಾಗುತ್ತಿದೆ.ಪ್ರಮಾಣದಲ್ಲಿ ಏರುಪೇರಾಗಿರಬಹುದು ಆದರೆ ತನ್ನ ಚಲನೆಯನ್ನು ಕಳೆದುಕೊಂಡಿಲ್ಲವೆAದೇ ಹೇಳಬಹುದು. ಕಾಲ ಕಾಲಕ್ಕೆ ಅದನ್ನು ಹೊಸಕಿ ಹಾಕುವ ಸಾಂಕ್ರಾಮಿಕ ಪ್ರವಾಹಗಳು ಆಗಾಗ ನುಸುಳಿದರೂ ಆ ಕಾಳಜಿಯ ಸೆಲೆ ಯಾವತ್ತೂ ಇಡಿಯಾಗಿ ಬುಡ ಮೇಲಾಗಿಲ್ಲ. ಬಹುಶಃ ಹಾಗಾಗುವುದೂ ಇಲ್ಲ.

ವರ್ತಮಾನದ ಜಗತ್ತಿನೊಂದಿಗೆ ಸಂವಾದಿಸುವ ಕವಿ ಸಮಾಜದ ಎದುರಿಗೆ ಪಕೀರ್ ಮತ್ತು ದೊರೆ ಎಂಬ ಎರಡು ರೂಪಗಳನ್ನು ಮುಖಾಮುಖಿಯಾಗಿಸುವನು. ಈ ಎರಡೂ ಶಬ್ದಗಳು ಮತ್ತು ರೂಪಕಗಳು ಕನ್ನಡ ಚರಿತ್ರೆಗೆ ಮತ್ತು ಕನ್ನಡ ಸಾಹಿತ್ಯಕ್ಕೆ ಹೊಸದಲ್ಲ. ಆದರೆ ಇಲ್ಲಿ ರೂಪಿತಗೊಂಡ ಸ್ವರೂಪ ಮಾತ್ರ ವರ್ತಮಾನದ ಅಗ್ನಿ ಕುಂಡದ ಕುರಿತೇ ಆಗಿದೆ. ಆಧ್ಯಾತ್ಮದ ಅಥವಾ ಅನುಭಾವವನ್ನು ಪ್ರತಿನಿಧಿಸುವ ಪಕೀರ್ ಅಲೌಕಿಕ ಚಿಂತನಾಕ್ರಮವನ್ನು

ಸಾಮಾಜಿಕಗೊಳಿಸುವ ಬಗೆಯಲ್ಲಿ ಪರಿಭಾವಿಸಿದಂತೆ ಭೌತಿಕ ಶಕ್ತಿಯನ್ನು ಕೇಂದ್ರೀಕರಿಸಿ ಬರೀದೇ ಬಣ್ಣ ಬಣ್ಣದ ಬಲೂನನ್ನು ಹಾರಿಬಿಟ್ಟು ಸಂಭ್ರಮಿಸುವ, ವಿಜೃಂಭಿಸುವಂತೆ ತೋರ್ಪಡಿಸುವ ಸ್ವರೂಪವಾಗಿ ದೊರೆ ಕಾಣುತ್ತಾನೆ. ದೊರೆಯ ವರ್ತಮಾನದ ವಂದಿಮಾಗಧರು ಛತ್ರ ಚಾಮರ ಗಂಟೆಯ ಜಾಗಟೆಯ ಘೋಷ ಒಂದೆಡೆಯಾದರೆ ಚರಿತ್ರೆಯ ವರ್ಣರಂಜಿತ ಕಥನಾತ್ಮಕಗಳು ಇನ್ನೊಂದು ಬಗೆಯದು. ವಿಚಿತ್ರವೆಂದರೆ ಫಕೀರನೇ ಎಲ್ಲ ಕಾಲದ ಆದರ್ಶ ಹೊರತು ದೊರೆಯಲ್ಲ. ಹಾಗೊಂದು ವೇಳೆಯಾದರೇ ಅದು ಆ ಕಾಲಮಾನದ ಅನಿವಾರ್ಯತೆ ಅಷ್ಟೇ. ಅದು ಅಶಾಶ್ವತ ಮತ್ತು ತಾತ್ಕಾಲಿಕವಾದದ್ದು. ಮನುಷ್ಯನ ಜೀವನಕ್ಕೆ ಲೌಕಿಕ ಮತ್ತು ಅಲೌಕಿಕ ಈ ಎರಡೂ ಬೇಕು. ಹಾಗಾಗಿ ಲೌಕಿಕದ ನೆರೆಟಿವ್ ಕಾಲದಿಂದ ಕಾಲಕ್ಕೆ ಬೇರೆ ಬೇರೆಯಾಗಿರುತ್ತದೆ. ಆದರೆ ಇದೇ ಪ್ರಶ್ನೆ ಅಲೌಕಿಕ ಕುರಿತು ಕೇಳಿಕೊಂಡರೆ ಉತ್ತರಿಸುವುದು ಕಷ್ಟವಾಗುತ್ತದೆ. ಹಾಗಂತ ಉತ್ತರವೇ ಇಲ್ಲವೆಂದಲ್ಲ. ಇಲ್ಲಿ ಯಾವುದಕ್ಕೂ ಕೊನೆಯಿಲ್ಲ.

ಫಕೀರ್ ಮತ್ತು ದೊರೆ ಈ ಎರಡು ವೈರುಧ್ಯಗಳು ಸಮಕಾಲಿನ ಸಾಮಾಜಿಕ, ರಾಜಕೀಯ ಪ್ರತಿಬಿಂಬವೇ ಆಗಿದೆ. ಇಲ್ಲಿಯ ಫಕೀರ ಲೌಕಿಕ ಮತ್ತು ಅಲೌಕಿಕದ ಸ್ವರೂಪದವನ್ನು ಲೋಕದ ಆಗುಹೋಗುಗಳಿಗೆ ಸ್ವಂದಿಸುವನು. ಅದರ ಗುಣಾವಗುಣಗಳ ಹಿನ್ನೆಲೆಯಲ್ಲಿ ಹಿಗ್ಗುವನು, ಕುಗ್ಗುವನು. ಕವಿಯನ್ನು ಆವರಿಸಿರುವ ಈ ಫಕೀರ್ ಮತ್ತಾರೂ ಅಲ್ಲ ಅದು ಗಾಂಧಿನೇ. ಅದು ಕೇವಲ ಗಾಂಧಿಯಲ್ಲ ಅದೊಂದು ಅಮೂರ್ತ ಶಕ್ತಿ. ಭಾರತೀಯ ಪರಂಪರೆಯ ವಾರಸುದಾರಿಕೆಯ ಧ್ವನಿ, ಉಸಿರು, ತತ್ವ ಸಿದ್ಧಾಂತ ಇತ್ಯಾದಿ ಇತ್ಯಾದಿ. ಕವಿ ಕೇವಲ ಫಕೀರನೊಂದಿಗೆ ಸಂವಾದಕ್ಕಿಳಿದಾಗಲೂ ಅಥವಾ ಸ್ವಗತಗೈಯುವಾಗಲೂ ದೊರೆಯ ಪ್ರಸ್ತಾಪವಿಲ್ಲದೆ ಅವನಿಂದ ರೋಸಿಹೋದ, ಅಸಹನೀಯಗೊಂಡ ಮನಸ್ಥಿತಿ ಎದ್ದು ಕಾಣುತ್ತದೆ. ಆದರೆ ಫಕೀರನೊಂದಿಗೆ ಎಷ್ಟೇ ಸಿಟ್ಟಾದರೂ ಅಪಾರವಾದ ಗೌರವವಿರುವುದನ್ನು ಕವಿತೆಯ ಮೂಲಕ ಅರಿಯಬಹುದು. ಒಂದು ಕಾಲಮಾನದ ಸಹಜ ಜೀವನ ಕ್ರಮ ಮತ್ತು ಬೌದ್ಧಿಕತೆಯನ್ನು ಪಲ್ಲಟಗೊಳಿಸುವ ವ್ಯವಸ್ಥೆಯ ಕುರಿತು ಕವಿ ಪ್ರಶ್ನಿಸುವನು.

'ನೀ ಬಿಟ್ಟು ಹೋದ ದಾರಿಗಳ ಮೇಲೆ
ಪ್ರೀತಿಗೆ ಬರ ಬಂದಿದೆ
ಎರಡು ಕಡಲು ದಾರಿಗಳ ಮೇಲೆ
ಘಟಸರ್ಪ ಬಿದ್ದಿದೆ
……
ಫಕೀರ
ನನ್ನ ಈ ವಿಷಾದದ ದನಿ
ಯಾವ ಭಾಷೆಯಲಿ ಹೇಳಲಿ

……

ಬಾ ಫಕೀರ

ನಿನ್ನದೇ ಸ್ವರ್ಗದಲ್ಲಿ ನರಕ ತೋರಿಸುವೆ'೪

ಅಂಹಿಸೆ, ಶಾಂತಿ, ಸಹಬಾಳ್ವೆ ಹಾಗೂ ಕೂಡಿ ಬಾಳುವ ನೆಲದಲ್ಲಿ ವಿಷಮ ಸ್ಥಿತಿ ಆವರಿಸುತ್ತಿರುವ ಕುರಿತು ಆತಂಕವಿದೆ. ಈ ಮೌಲ್ಯಗಳನ್ನು ಪ್ರತಿಪಾದಿಸಿದ ಪೂರ್ವಸೂರಿಗಳು ಕೂಡ ವರ್ತಮಾನದಲ್ಲಿ ಶಿಲುಬೆಗೆ ಏರುವ ಸ್ಥಿತಿ ಇದೆ ಎನ್ನುವುದು ಆಘಾತಕಾರಿಯಾದದ್ದು.

ಶಾಂತಿ ಸಹಬಾಳ್ವೆ ಬಯಸುವ ಫಕೀರ್ ವರ್ತಮಾನದ ಸವಾಲುಗಳಿಗೆ ಮುಖಾಮುಖಿಯಾಗುವನು. ಈ ಫಕೀರ್ ಕಣಕಣದಲ್ಲಿಯೂ ಬೆರೆತು ಹೋಗಿದ್ದಾನೆ. ಅವನ ಮೌಲಿಕ ಜೀವನ ಕ್ರಮ ಆದರ್ಶಪ್ರಾಯವಾದದ್ದು. ಈ ಸಂಕೀರ್ಣ ನೆಲದಲ್ಲಿ ಕೂಡ ಪ್ರೀತಿಯನ್ನು ಹುಟ್ಟಿಸಿದ್ದಾನೆ. ಹಂಚಿದ್ದಾನೆ. ಹಿಂಸೆಯ ಘನ ಘೋರ ನರಕಕ್ಕೆ ಎದುರಾಗಿ ಶಾಂತಿಮಂತ್ರದ ಉದ್ಘೋಷವನ್ನು ಕೊಟ್ಟಿದ್ದಾನೆ. ಒಂದು ಕಾಲದ ಸಂಕೀರ್ಣತೆಗೆ ಪರಿಹಾರಾತ್ಮಕ ಉತ್ತರ ಹುಡುಕಿ ಜಗದ ಎದೆಯಲಿ ನೆಲೆಸಿದ್ದವನು. ಆದರೆ ಅದೇ ಫಕೀರ್ ವರ್ತಮಾನದಲ್ಲಿ ಉಸಿರಾಡುವುದು ಕಷ್ಟವೆಂದು ಕವಿ ಹೇಳುವನು. ಆಕ್ರಮಣಕಾರಿ ವಿಷಮ ಸ್ಥಿತಿಯಿಂದ ಹೃದಯ ಹೆಪ್ಪುಗಟ್ಟಿದೆ. ಭಯದ ನೆರಳಲ್ಲಿ ಬದುಕು ಸಾಗಿಸುವ ಸ್ಥಿತಿ ಒಂದೇಡೆಯಾದರೆ ಒಟ್ಟು ಬದುಕೇ ನಿತ್ರಾಣ ನಿರ್ಜೀವವಾದಂತಾಗಿದೆ.

'ಅಹಿಂಸೆ ಬೀಜ ಬಿತ್ತಲು ನೀನೊಮ್ಮೆ

ಬಂದರಿಲ್ಲಿ

ಮುಳ್ಳು ಕಂಟಿಗಳ ಮೇಲೆ ನಿನ್ನ ನೋಡಬೇಕಾಗುತ್ತದೆ

ನೆತ್ತರ ಹರಿಸುವ ಗದ್ದೆಗೆ ಮುಖಮಾಡಿ'೫

ವರ್ತಮಾನ ಕಲುಷಿತ ಗಾಳಿಯಿಂದ ಆವರಿಸಿದೆ. ಇಲ್ಲಿ ಪೂರ್ವಾಪರಗಳನ್ನು ಕೇಳಲು ಸಹನೆ ತಾಳ್ಮೆಗಳಿಲ್ಲ. ಚರಿತ್ರೆಯ ನಿಜ ಸ್ವರೂಪ ಅರಿಯುವ ಮನಸ್ಸಿಲ್ಲ. ಆದರೆ ಯಾರೋ ಹರಿಬಿಟ್ಟ ಹರಿಕತೆಯನ್ನೇ ಸತ್ಯವೆಂದು ನಂಬಿ ಹೊರಟ ಜನಸಮೂಹದ ಸ್ಥಿತಿ ಊಹಿಸಲು ಅಸಾಧ್ಯವಾದದ್ದು. ಇಂತಹ ಸಂದರ್ಭದಲ್ಲಿ ಸ್ವತಃ ಫಕೀರನೇ ಬಂದರೂ ಅಪಾಯ ತಪ್ಪಿದ್ದಲ್ಲ ಎನ್ನುವ ವಿಷಮ ಸ್ಥಿತಿಯ ಕುರಿತು ಕವಿ ಕಳವಳ ಪಡುವನು. ಒಂದು ಕಾಲಮಾನವನ್ನು ಪ್ರಭಾವಿಸಿದ ಚಿಂತನೆಯಾಗಲಿ ಅಥವಾ ಪರಂಪರಾಗತವಾಗಿ ಕಾಲದಿಂದ ಕಾಲಕ್ಕೆ ಮೌಲ್ಯಗಳನ್ನು ಬೋಧಿಸುತ್ತ ಬಂದ ಇದೇ ನೆಲದಲ್ಲಿ ಈಗ ಇದೆಲ್ಲವು ಗಾಳಿಗೆ ತೂರುವ ವೈರುಧ್ಯದ ಘಟನೆಗಳು ನೋಡುವಂತಾಗಿದ್ದು ವಿಷಾದನೀಯವಾದದ್ದು. ಆದರೂ ಕವಿಗೆ ಫಕೀರನ ಮೇಲೆ ಇನ್ನಿಲ್ಲದ ಪ್ರೀತಿ.

'ಹಾಡಾಗಿ ಬಾ ಪಕೀರ
ಒಂದು ಸ್ವರ ಇನ್ನೊಂದನ್ನು ಹಿಂಬಾಲಿಸುವ
ಹಾಗೆ
ಇಲ್ಲಿ ಸ್ನೇಹವಿದೆ
ಇಲ್ಲಿ ಬಂಧನವಿದೆ
ಆದರೆ
ಪ್ರೀತಿ ಮೀಟುವ ವೀಣೆ
ಅಗೋಚರ ಹಾಡು
ತಂಬೂರಿ ನಾದ
ಎತ್ತರದ ಗೋಡೆ
ದೊಡ್ಡ ಗಡಿಯಾರ
ಎರಡಕ್ಕೂ ಒಂದೇಯಾಗಬೇಕಿದೆ ನೀನು ನಿನಗೆಲ್ಲಿ ಭೇದಭಾವ
ಬಣ್ಣಗಳ ಅರಿತವ
ಬಣ್ಣಗಳನ್ನು ನುಂಗಿದವ'೬

ಈ ಸಂಕಲನದ ಮುಖ್ಯ ಕೇಂದ್ರ ಪ್ರಜ್ಞೆ ಫಕೀರ ಮತ್ತು ದೊರೆ. ಸ್ಥಾಯಿ ಭಾವವು ಹೌದು. ಸಂಕಲದುದ್ದಕ್ಕೂ ಫಕೀರತನ ಮಾರ್ದನಿಸುತ್ತದೆ. ದೊರೆಯ ಅರಾಜಕತೆಗೆ, ಅವಿವೇಕಕ್ಕೆ, ಸರ್ವಾಧಿಕಾರದ ನಡೆಗೆ ಪ್ರತಿಕ್ರಿಯಿಸುವ ಕವಿ ಅದರ ಹಿಂದಿನ ಭಯಂಕರ ಪರಿಣಾಮದ ಬಗೆಯ ಕುರಿತು ಅರಿವಿದ್ದಂತಿದೆ. ಪ್ರಭುತ್ವವನ್ನು ಎದುರುಗೊಳ್ಳಬೇಕಾದರೆ ಪ್ರಭುತ್ವದ ಸ್ವರೂಪ ಮತ್ತು ಆ ಸೂಕ್ಷ್ಮತೆಯನ್ನು ಅರಿತಿರಬೇಕಾಗುತ್ತದೆ. ಹಾಗಾಗದಿದ್ದರೆ ಹುಸಿ ಪ್ರಶ್ನೆಯಾಗಿ ಅಪಹಾಸ್ಯಕ್ಕೆ ಕಾರಣವಾದಂತಾಗುತ್ತದೆ. ಆದರೆ ಇಲ್ಲಿಯ ಪ್ರಭುತ್ವ ಮುಖೇನ ಸಂವಾದವು ಸ್ಫಟಿಕದಂತೆ ಸ್ಪಷ್ಟೀಕರಣಗೊಂಡಂತಿದೆ. 'ದೊರೆಗೊಂದು ಪತ್ರ', 'ವಿದಾಯ', 'ನಾಲೆಯಾಗಿ ಹರಿಯುತ್ತಿದೆ ಕಣ್ಣೀರು', 'ನೆತ್ತರ ಕುಡಿಯುವರು' ಮುಂತಾದ ಕವಿತೆಗಳು ದೊರೆಯ ವಿವಿಧ ಬಗೆಯ ಮುಖ ಚಹರೆಯನ್ನು ಪರಿಚಯಿಸುತ್ತವೆ. ಈ ಎಲ್ಲದರಲ್ಲಿಯೂ ದಟ್ಟವಾದ ನೋವಿನ ಛಾಯೆ ಎದ್ದು ಕಾಣುತ್ತದೆ.

'ಈ ಜಗಮಗಿಸುವ ದೀಪ ರಾತ್ರಿಯಲಿ

ಕತ್ತಲು ಹುಡುಕಿ
ಉತ್ತರ ಹೇಳದೆ ಅಳಬೇಕು
ಏಕೆಂದರೆ ಯಾತನೆಗಳನು
ಚರಿತ್ರೆಯ ಪುಟ ಸೇರಿಸುವ
ಪೆನ್ನು ಈಗ ಗಡಿ ಪಾರಾಗಿದೆ'೭

ಸರ್ವಾಧಿಕಾರಿ ದೊರೆಯ ಚಿತ್ರವನ್ನು ಕವಿತೆಯ ಮೂಲಕ ನೋಡಬಹುದು. ಇಲ್ಲಿ ಎಲ್ಲವೂ ಅಮಾನತ್ತಿನಲ್ಲಿದೆ. ತಲೆ ಎತ್ತಿ ನೋಡಲು ಅವಕಾಶವಿಲ್ಲ. ಭಾರ ಹೊರುವ ಕತ್ತೆಯಂತೆ ಮರು ಪ್ರಶ್ನಿಸದೆ, ಹೊತ್ತು ನಡೆಯಬೇಕು ದೊರೆ

ನಿರ್ದೇಶನದಂತೆ ಮೂಕವಾಗಿ. ಒಳಗಿನ ನೋವನ್ನು ಸಂಕಟವನ್ನು ತೋಡಿಕೊಳ್ಳಲು ಅವಕಾಶವಿಲ್ಲ. ಕೊನೆಯ ಪಕ್ಷ ಕಣ್ಣೀರಿಡಲು ಸ್ವಾತಂತ್ರ್ಯವಿಲ್ಲ. ಸರ್ವಋತು, ಸರ್ಪಗಾವಲಾಗಿ ಕಾಯುತ್ತಿದ್ದಾನೆ. ದಟ್ಟವಾದ ನೋವಿನ ಹಂದರದಂತಿರುವ ದಿಗ್ಬಂಧನದ ಅನುಭವವು ದೊರೆ ಮತ್ತು ಪ್ರಜೆಗಳ ನಡುವಿನ ಅಧಿಕಾರದಾಹಿ ನಿಲುವು, ಗುಲಾಮಿತನದ ಅಸಹಾಯಕತೆಯನ್ನು ಕಟ್ಟಿಕೊಟ್ಟಿದೆ. ಪ್ರಭುತ್ವವು ಯಾವಾಗಲೂ ಸರ್ವಾಧಿಕಾರದ ಕಡೆಗೆ ಚಲಿಸುತ್ತಿರುತ್ತದೆ. ಆದರೆ ಜಗತ್ತಿನ ಚರಿತ್ರೆಯನೊಮ್ಮೆ ಗಮನಿಸಿದರೆ ಸರ್ವಾಧಿಕಾರಿ ಪ್ರಭುತ್ವಕ್ಕೆ ಆಯುಷ್ಯವೆಯಿಲ್ಲ. ಅದು ನಂದುವಾಗ ಉರಿಯುವ ದೀಪದಂತೆ. ಆದರೆ ವರ್ತಮಾನ ಜಗತ್ತಿನ ಪ್ರಭುತ್ವವು ಸರ್ವಾಧಿಕಾರ ಮತ್ತು ಮತಾಂಧತೆ ಕಡೆಗೆ ಚಲಿಸುತ್ತಿರುವುದು ಸ್ಪಷ್ಟ.

'ದೊರೆಯ ಮೋಹ ಮೋಜಿಗೊಂದಿಷ್ಟು ಬೇಲಿಯ ಮೇಲೆ ನಿಂತು
ನಿಸ್ಸಂಶಯವಾಗಿ ಕೊಲ್ಲಿಸಿಕೊಳ್ಳುವವರ
ನೆತ್ತರು ಕುಡಿಯುತಲಿದ್ದೇವೆ'೮
(ನೆತ್ತರು ಕುಡಿಯುವರು ಪುಟ-೨೯)

ಬಣ್ಣ ಬಣ್ಣದ ಹುಸಿ ಕನಸು ಮಾರುವ ದೊರೆ ಸ್ಥಿರ ಬದುಕಿನ ಮೇಲೆ ಬಲತ್ಕಾರ ಮಾಡುತ್ತಾ ಶಿಲುಬೆಗೇರಿಸುತ್ತಿದ್ದಾನೆ. ಸಾಲದಕ್ಕೆ ಅಪಾಯಕಾರಿ ಉಪಕರಣಗಳನ್ನು ಬಳಸುತ್ತಿದ್ದಾನೆ. ಅವಿವೇಕದ ಅಧಿಕಾರಧಾಹಿ ಮನೋಭಾವವನ್ನು ಮನವರಿಕೆ ಮಾಡಲೆಂದು ಕವಿ 'ದೊರೆಗೊಂದು ಪತ್ರ' ಬರೆದಿರುವನು. ಅವನ ಪೊಳ್ಳುತನದ ಆಡಂಬರ ತುಂಬಿದ ಹೊಸ ಬಗೆಯ ಉಡುಗೆ ತೋಡುಗೆ ಲೋಕ ಮರುಳು ಮಾಡುವ ನುಡಿ ಕೇವಲ ಬೆಂಕಿಯಲ್ಲಿ ಸುನಾಮಿಯನ್ನು ಆಹ್ವಾನಿಸಿಕೊಂಡಂತಿದೆ.

ಬಹುತ್ವದ ಒಡಲನ್ನು ಛಿದ್ರವಾಗಿಸಿ ಒಲವಿನ ಪ್ರಾರ್ಥನೆಯನ್ನು ಭ್ರಷ್ಟಗೊಳಿಸಲಾಗಿದೆ. ಈ ಪವಿತ್ರ ಭರತ ಭೂಮಿ ದುರಾಡಳಿತವನ್ನು, ಹಿಂಸೆಯನ್ನು, ಅವಿವೇಕವನ್ನು ಯಾವತ್ತು ಮನ್ನಿಸಲಾರದು ಎನ್ನುವ ವಿನಮ್ರ ವಿವೇಕ ಹೇಳುವ ಪತ್ರವೇ ಈ 'ದೊರೆಗೊಂದು ಪತ್ರ' ಕವಿತೆಯ ವಸ್ತುವಾಗಿದೆ.

'ಬಿಳಿ ಬಲವಾದ ಈ ನೆಲದ ಮೇಲೆ

ನಿನ್ನ ಕಣ್ಣು ಕೆಂಪಾಗಿದ್ದಕ್ಕೆ ಬೇಸರವಿದೆ ನನಗೆ

.....

ಮತ್ತೆ ಮತ್ತೆ ಕೊಲ್ಲುವ ಕಾಗದ ಪೋಸ್ಟ್ರಗಳು ರಾಜ್ಯ ಶಾಸನದ ತತ್ವಗಳಲ್ಲ ಇವು

ಕಣ್ಣುಗಳಲ್ಲಿ ಮುಳ್ಳುಗಳೆಬ್ಬಿಸಿ

ಚುಚ್ಚಿಸಿಕೊಳ್ಳುವ ಪೀಡೆಗಳು

....

ಖಾಕಿ ಖಾದಿ ಕಾವಿಗಳು ರಾರಾಜಿಸುತ್ತಿದ್ದರೆ ನನ್ನವರ ಒಡಲ ತುಂಬಿ ರಕ್ತ ಹರಿಯುತ್ತದೆ

.....

ಪ್ರಿಯ

ದೊರೆಯೇ

ಈ ಪತ್ರವನ್ನೊಮ್ಮೆ ಓದಿ ಬಿಡು

ಉತ್ತರ ಬರೆಯಬೇಕೆಂದೇನೂ ಇಲ್ಲ

ಮನಸ್ಸು ಬದಲಿಸಿದರೂ ಸಾಕು'೯

ಈ ಸಂಕಲನದ ಕವಿತೆಗಳು ದೊರೆ ಮತ್ತು ಫಕೀರ್ ಪರಿಕಲ್ಪನೆ ಮರುವ್ಯಾಖ್ಯಾನದಂತಿದೆ. ಗ್ಯಾರಿಬಾಲ್ಡಿ ಕವಿತೆಯು ಸಮಕಾಲೀನ ರಾಜಕಾರಣದ ಅಪಮೌಲ್ಯೀಕರಣಕ್ಕೆ ಕನ್ನಡಿ ಹಿಡಿದಂತಿದೆ. ಗ್ಯಾರಿಬಾಲ್ಡಿ ಇಟಲಿಯ ಸ್ವಾತಂತ್ರ ಹೋರಾಟಗಾರ. ಇಟಲಿಯ ಏಕೀಕರಣಕ್ಕಾಗಿ ಹೋರಾಡಿದ ಅಪ್ರತಿಮ ಕ್ರಾಂತಿಕಾರ, ದೇಶಭಕ್ತ. ನಮ್ಮ ಸುಭಾಷ್‌ಚಂದ್ರ ಬೋಸರಂತೆ. ಗೌತಮ ಬುದ್ಧ, ಸಾಮ್ರಾಟ ಅಶೋಕ, ಗೌತಮಿಪುತ್ರ ಶಾತಕರಣಿ ಮುಂತಾದವರಂತೆ ಗ್ಯಾರಿಬಾಲ್ಡಿಯು ಅಖಂಡ ಇಟಲಿಯ ಕನಸು ಹೊತ್ತು ಕೆಂಪಂಗಿಯ ದಳ ಕಟ್ಟಿಕೊಂಡು ಹೋರಾಟಕ್ಕೆ ದುಮುಕ್ಕಿದ್ದವನು. ರಾಜಪ್ರಭುತ್ವದಲ್ಲಿ ಅಪಾರ ನಂಬಿಕೆಯಿಟ್ಟ ಆಸ್ಟ್ರಿಯಾದ ಪ್ರಧಾನಮಂತ್ರಿ ಮೆಟರ್ನಿಕ ಪ್ರಜಾಪ್ರಭುತ್ವದ ಕಡುವೈರಿಯಾಗಿದ್ದನು. ಈಡೀ ಯುರೋಪದಲ್ಲಿ ಮತ್ತೆ ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪನೆಯಾಗಬಾರದೆಂದು ಇಟಲಿಯನ್ನು ಛಿದ್ರ ಛಿದ್ರಗೊಳಿಸಿ ಮತ್ತೆ ಒಂದಾಗದಂತೆ ವಿದೇಶಿಯರ ಕೈಗಿಟ್ಟು ಸೈನ್ಯ ಕಟ್ಟಿಕೊಂಡು ಸರ್ಪಗಾವಲಿನಂತೆ ಇಟಲಿ ಒಂದಾಗ ಮಾಡಿದನು. ನೆಪೋಲಿಯನನ ದಂಡ ಯಾತ್ರೆಯಿಂದ ಮತ್ತು ಅವನು ಒಗ್ಗೂಡಿಸುವ ನೀತಿ ಹಾಗೂ ಏಕರೂಪ ಆಡಳಿತ ಮತ್ತು ಕಾನೂನುಗಳು ಇಟಾಲಿಯನ್ನರಲ್ಲಿ 'ನಾವೆಲ್ಲ ಒಂದೇ' ಎನ್ನುವ ಭಾವ ಮೂಡುವಂತಾಯಿತು. ವಿಶೇಷವೆಂದರೆ, ಗ್ಯಾರಿಬಾಲ್ಡಿ ಖಡ್ಗದಿಂದಲೇ ಏಕೀಕರಣ ಸಾಧ್ಯವೆಂದು ನಂಬಿದ್ದ. ಅದಕ್ಕಾಗಿ "ಕೆಂಪಂಗಿದಳ" ಕಟ್ಟಿಕೊಂಡು ಸಿಸಿಲ್, ನೇಪಲ್ಸ್ ಮುಂತಾದ ಪ್ರದೇಶಗಳನ್ನು ಗೆದ್ದುಕೊಂಡು ಸಾರ್ಡೀನಿಯಾದ ಅರಸ ಎರಡನೆಯ ವಿಕ್ಟರ್ ಎಮ್ಯಾನ್ಯುಯೆಲ್‌ಗೆ ವಹಿಸಿ ಯಾವ ಪ್ರತಿಫಲಾಪೇಕ್ಷೆಯನ್ನು ಬಯಸದೆ ತನ್ನ ಹುಟ್ಟುರಾದ ಕ್ಯಾಪ್ರೇರ ದ್ವೀಪಕ್ಕೆ ತೆರಳಿ ಕೃಷಿ ಮಾಡುತ್ತ ಬದುಕಿದ ಅಪಾರ ದೇಶಾಭಿಮಾನಿಯಾದಂತೆ,

ಪ್ರೇಮಿಯೂ ಆಗಿದ್ದ ಈತ ಕೊನೆಗೆ ಮಣ್ಣಿನೊಂದಿಗೆ ಬದುಕಿ ಮಣ್ಣಾದ. ಅವನ ಬದುಕೇ ಒಂದು ಸಂದೇಶ. ಗ್ಯಾರಿಬಾಲ್ಡಿ ಸರ್ವಾಧಿಕಾರಿಯ ವಿರೋಧಿಯಾದಂತೆ ರಾಷ್ಟ್ರಾಭಿಮಾನಿಯು ಆಗಿದ್ದ. ಪ್ರಜಾಪ್ರಭುತ್ವವಾದಿಯಾದ ಇವನು ರಾಜಕೀಯ ಸಂತನು ಹೌದು.

‘ಇಟಲಿಯಲ್ಲೊಬ್ಬ
ಸ್ವಾತಂತ್ರ್ಯ ಹೋರಾಟಗಾರ
ಹೊಲಗದ್ದೆಯಲಿ ಕೈಕೆಸರು ಮಾಡಿಕೊಂಡವನಿದ್ದ
ಯುದ್ಧಕ್ಕೆಂದು ಹೋದಾಗ
ಸಮರಕ್ಕೊಂದು ಕತ್ತಿ
ಪ್ರೇಮಕ್ಕೊಂದು ಗುಲಾಬಿ
ಗುಲಾಬಿಗೊಂದು ಹಸಿರೆಲೆ,
ಹಸಿರೆಲೆಗೆ ಮಣ್ಣು
ಮಣ್ಣಿಗೊಂದಿಷ್ಟು ನೀರು
.....
ಸಿಸಲಿ
ನೇಪಲ್ಸ್
....
ಸಿಟಿ ಸ್ಟೇಟ್ ಗೆದ್ದೆನೆಂದು
ಬಿದ್ದವರನೆಲ್ಲ ಎಬ್ಬಿಸಿ ಗೆದ್ದುದ್ದೆಲ್ಲಾ ಬಿಟ್ಟು
.....
ಗುಲಾಬಿ ಕೊಟ್ಟು
ರಕ್ತಮೆತ್ತಿದ ಅಂಗಿ
ಎದಿರೇಟಿಗೆ ಕತ್ತರಿಸಿ ಬಿದ್ದ ಗಡ್ಡ ಹಿಡಿದು
ಗ್ಯಾರಿಬಾಲ್ಡಿ ನಡೆದ
ಹೊಲಗದ್ದೆಯೆಡೆಗೆ
ಉತ್ತಿ ಬಿತ್ತುವ ತನ್ನೂರಿಗೆ’[೧೦]

ಕವಿತೆ ಚಿಕ್ಕದು. ಆದರೆ ಅದು ಬೀರುವ ಪರಿಣಾಮ ಮಾತ್ರ ದೀರ್ಘಕಾಲದೆಂದು ಹೇಳಬಹುದು. ಪ್ರಜಾಪ್ರಭುತ್ವ, ಕ್ರಾಂತಿ, ಪ್ರೇಮ ಮತ್ತು ತ್ಯಾಗದ ಸಂಕೇತದಂತೆ ಈ ಕವಿತೆ ಇದೆ. ದೊರೆ ಮತ್ತು ಫಕೀರ್ ಪರಿಕಲ್ಪನೆಯ ಒಟ್ಟು ಮೊತ್ತ ಈ ಗ್ಯಾರಿಬಾಲ್ಡಿ ಕವಿತೆಯೆಂದು ಭಾವಿಸಬಹುದು.

‘ದೇವರು ಸತ್ತಿದ್ದಾನೆ’ ವೈಚಾರಿಕತೆಯನ್ನು ಪ್ರತಿಪಾದಿಸುವ ಕವಿತೆ. ಇಲ್ಲಿಯ ಸಾಂಕೇತಿಕ ಕಥನಾತ್ಮಕ ಚಿತ್ರ, ವೈಚಾರಿಕತೆಯ ಎಚ್ಚರಿಕೆ, ಅರ್ಚಕನ ಹಪಾಹಪಿ ಹಾಗೂ ಮೌಢ್ಯದ ನೆರೆಟಿವ್ ಅವಸಾನದಂತೆ ಕಾಣುತ್ತದೆ. ಆದರೂ ನಮ್ಮ ಸಮಾಜ ಪರಿಪೂರ್ಣ ವೈಚಾರಿಕತೆಗೆ ಪರಿಪಕ್ವಗೊಂಡಿಲ್ಲವೆನ್ನುವುದು ಕವಿತೆಯ ಜಾಗೃತ ಸ್ಥಿತಿ

ಮನವರಿಕೆಗೊಳಿಸುತ್ತದೆ. ಈ ಸಂಕಲನದ 'ಮಳೆಯ ಪುರಾಣ', 'ಹಾಲಕ್ಕಿ ನುಡಿದಾವ', 'ನರಬಲೀಶ್ವರಲಿಂಗ' ಮುಂತಾದ ಕವಿತೆಗಳು ಪ್ರಯೋಗಗಳ ದೃಷ್ಟಿಯಿಂದ ಗಮನ ಸೆಳೆಯುತ್ತವೆ.

ಈ ಸಂಕಲನದುದ್ದಕ್ಕೂ ಮತ್ತೆ ಮತ್ತೆ ಅನುರಣಿಸುವುದು ಒಂದೇ ಅದು ಪ್ರಜಾಪ್ರಭುತ್ವ ಮತ್ತು ಅಪ್ಪಟ ಪ್ರೇಮ. ಈ ಎರಡು ಪರಿಕಲ್ಪನೆಗೆ ಆಶ್ರಯವಾಗಿ ಚರಿತ್ರೆ, ಪುರಾಣ, ಜಾನಪದ ಬೆನ್ನಿಗಿದ್ದಂತಿದೆ. ಕಾವ್ಯದ ನುಡಿಗಟ್ಟು ಮತ್ತು ಪ್ರತಿಮಾ ಶೈಲಿಯಿಂದ ಪ್ರಯೋಗಾತ್ಮಕವಾದ ಸಂಕಲನವಾಗಿದೆಯೆಂದು ಹೇಳಬಹುದು.

**ಅಡಿಟಿಪ್ಪಣಿ**

೧) ಸಾತತ್ಯ ಪು-೬೪,೬೫

೨) ಗಾಳಿಗೆ ತೊಟ್ಟಿಲ ಕಟ್ಟಿ ಪುಟ೦೨

೩) ಅದೇ ಪುಟ-೩೩

೪) ಅದೇ ಪುಟ-೨೨

೫) ಅದೇ ಪುಟ-೦೨

೬) ಅದೇ ಪುಟ-೦೩

೭) ಅದೇ ಪುಟ-೩೮

೮) ಅದೇ ಪುಟ-೨೯

೯) ಅದೇ ಪುಟ-೦೪,೦೫,೦೬

೧೦) ಅದೇ ಪುಟ-೧೫,೧೬

**ಮೂಲಗ್ರಂಥ**

೧) ದೇವು ಮಾಕೊಂಡ- ಗಾಳಿಗೆ ತೊಟ್ಟಿಲ ಕಟ್ಟಿ- ನೆಲೆ ಪ್ರಕಾಶನ ಸಂಸ್ಥೆ ಸಿಂದಗಿ- ೨೦೨೧.

**ಪರಾಮರ್ಶನಗ್ರಂಥ**

೧) ಗಿರಡ್ಡಿ ಗೋವಿಂದರಾಜ- ಸಾತತ್ಯ- ಹೇಮಂತ ಸಾಹಿತ್ಯ ಪ್ರಕಾಶನ ಬೆಂಗಳೂರು- ೨೦೧೫ (ದ್ವಿತೀಯ ಮುದ್ರಣ).